(ದಿನಾಂಕಃ 11-04-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು)

ಮುಂದುವರೆದ ಪಾಟಿ ಸವಾಲು ಃ ಶ್ರೀ ಪಿ.ಆರ್.ಸಿ. ಪ್ರತಿವಾದಿ ಪರ ವಕೀಲರಿಂದ -

ದಾವಾಸ್ತಿ 118 ಅ/2 ಇರುತ್ತದೆ. ದಾವಾಸ್ತಿಯ ಪೂರ್ವಕ್ಕೆ 118 ಬ ಆಸ್ತಿ ಬರುತ್ತದೆ. ಪಶ್ಚಿಮಕ್ಕೆ ಎನ್ ಎ ಆದ 2 ಎಕರೆ ಜಮೀನು ಇರುತ್ತದೆ. ದಕ್ಷಿಣಕ್ಕೆ ಹುಕ್ಕೇರಿ ಸೀಮೆ ಬರುತ್ತದೆ. ಉತ್ತರಕ್ಕೆ ಯಾವ ಆಸ್ತಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ದಾವೆಗೆ ಸಂಬಂಧಿಸಿದಂತೆ ಯಾವುದೇ ಪರಿಶಿಷ್ಟ "ಬ" ಹಾತ್ ನಕಾಶೆ ಕೊಟ್ಟಿರುವುದಿಲ್ಲ. 1 ನೇ ಪ್ರತಿವಾದಿ ಎಷ್ಟು ಜಾಗದಲ್ಲಿ ಮನೆ ಕಟ್ಟಿರುತ್ತಾನೆ ಎಂದು ನನಗೆ ಹೇಳಲು ಬರುವುದಿಲ್ಲ. ಅದೇ ರೀತಿ 2 ರಿಂದ 5 ನೇ ಪ್ರತಿವಾದಿಯರು ಎಷ್ಟು ಕ್ಷೇತ್ರದಲ್ಲಿ ಮನೆ ಕಟ್ಟಿರುತ್ತಾನೆ ಎಂದು ನನಗೆ ಹೇಳಲು ಬರುವುದಿಲ್ಲ.

ದಾವಾಸ್ತಿಯಲ್ಲಿ ಎಷ್ಟು ಕ್ಷೇತ್ರದಲ್ಲಿ ಮನೆ ಕಟ್ಟಿರುತ್ತಾರೆ ಎಂದು ಮೋಜಣಿ ವಗೈರೆ ಮಾಡಿರುವುದಿಲ್ಲ.ದಾವೆ ಮಾಡುವದಕ್ಕಿಂತ ಮೊದಲು 2016 ರಲ್ಲಿ ಮೋಜಣಿ ಆಗಿರುತ್ತದೆ. ಮೋಜಣಿ ಆದ ದಿನಾಂಕ ನನಗೆ ನೆನಪಿಲ್ಲ. ಮೋಜಣಿ ಸಂಬಂಧಿಸಿದಂತೆ ನಾನು ಯಾವುದೇ ನೋಟಿಸನ್ನು ಹಾಜರ ಪಡಿಸಿರುವುದಿಲ್ಲ. ಮೋಜಣಿ ಆದ ದಾಖಲೆಗಳನ್ನು ನ್ಯಾಯಾಲಯದಲ್ಲಿ ಹಾಜರ ಪಡಿಸಿರುತ್ತೇನೆ. 2015 ರಲ್ಲಿ ಆಗಲೀ ಅಥವಾ 2016 ರಲ್ಲಿ ಆಗಲಿ ಸರ್ವೆ ನಂ. 118 ಅ/2 ರಲ್ಲಿ ಯಾವುದೇ ಮೋಜಣಿ ಕಾರ್ಯ ಆಗಿಲ್ಲ ಎಂದರೆ ಸರಿಯಲ್ಲ. ಮೋಜಣಿಗೆ ಸಂಬಂಧಿಸಿದಂತೆ ಯಾರು ಯಾರಿಗೆ ನೋಟಿಸು ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ.

ನನ್ನ ಗಂಡ 2004 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ಅತ್ತೆ ಜೈತುನಬಿ ಈಗ ಜೀವಂತ ಇರುತ್ತಾರೆ. ನನಗೆ ಶಾಹಿನ , ಸಮೀರ ಮತ್ತು ಮೊಹಮ್ಮದ ಅಮೀರ ಮೂರು ಜನ ಗಂಡು ಮಕ್ಕಳು ಇದ್ದಾರೆ ಎಂದರೆ ಸರಿ . ನನಗೆ ಶಾಹಿನಬಿ ಎಂಬ ಒಬ್ಬ ಹೆಣ್ಣು ಮಗಳು ಇರುತ್ತಾಳೆ ಎಂದರೆ ಸರಿ . ರುಬಿನಾ ಮತ್ತು ಅಫ್ರೋಜಾ ನನ್ನ ಸೊಸೆಯಂದಿರರು ಎಂದರೆ ಸರಿ. ದಿನಾಂಕ 17-5-2018 ರಂದು ದಾವಾಸ್ತಿ ಜಮೀನನ್ನು ಶಿವಗೌಡಾ ರಾಮಗೌಡಾ ಪಾಟೀಲ ಇವರಿಗೆ ಖರೀದಿ ಪತ್ರ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ರದ್ದಾಗಿರುತ್ತದೆ ಎಂದು ನುಡಿಯುತ್ತಾರೆ. ಸುಮಾರು 1 ವರ್ಷದ

ಹಿಂದೆ ರದ್ದಾಗಿರುತ್ತದೆ. ಖರೀದಿ ಪತ್ರ ಸಬ್ ರಿಜಿಸ್ಟ್ರಾರ ಆಫೀಸಿನಲ್ಲಿ ರದ್ದಾಗಿರುವುದಿಲ್ಲ. ದಿನಾಂಕ 17-5-2018 ರಂದು ದಾವಾಸ್ತಿ ಕಬ್ಜಾವನ್ನು ಶಿವಗೌಡಾ ರಾಮಗೌಡಾ ಪಾಟೀಲ ಇವರಿಗೆ ಕೊಟ್ಟಿರುವುದಿಲ್ಲ. ಶಿವಗೌಡಾ ರಾಮಗೌಡಾ ಪಾಟೀಲ ತನ್ನ ಹೆಸರು ಹಚ್ಚಿಕೊಳ್ಳಲು ತಲಾಟಿ ಇವರ ಮುಂದೆ ಅರ್ಜಿ ಕೊಟ್ಟಿದ್ದನು ಎಂದರೆ ಸರಿ . ಸದ್ರಿ ಅರ್ಜಿಗೆ ಪ್ರತಿವಾದಿಯರು ತಕರಾರು ಸಲ್ಲಿಸಿದ್ದರಿಂದ ಅದು ಆರ್ ಟಿ ಎಸ್ ಪ್ರಕರಣ ಆಗಿರುತ್ತದೆ ಎಂದರೆ ಸರಿ. ಸದ್ರಿ ಪ್ರಕರಣದಲ್ಲಿ ತಹಶೀಲ್ದಾರ ಅವರ ಆದೇಶದ ಪ್ರಕಾರ ಕಂದಾಯ ಅಧಿಕಾರಿಗಳಾದ ಗ್ರಾಮ ಲೆಕ್ಕಾಧಿಕಾರಿ ಹುಕ್ಕೇರಿ, ಕಂದಾಯ ನಿರೀಕ್ಷಕರು ಹಾಗೂ ಮೋಜಣಿದಾರರು ಸ್ಥಳಕ್ಕೆ ಹಾಜರ ಆಗಿ ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿ . ಆರ್.ಟಿ.ಎಸ್ ನಂ. 40/2018 ಇದು ನಿಖಾಲೆ ಆಗಿದೆ ಎಂದರೆ ಸರಿ. ಸದ್ರಿ ಪ್ರಕರಣದಲ್ಲಿ ದಾವಾಸ್ತಿಯಲ್ಲಿ ಮನೆಗಳು , ಪ್ಲಾಟಗಳು ಮತ್ತು ರಸ್ತೆಗಳು ಇವೆ ಎಂದು ವರದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಆರ್.ಟಿ.ಎಸ್ ನಂ. 40/2018 ರ ಆದೇಶದ ಮೇಲೆ ಬೆಳಗಾವಿಯ ಎ.ಸಿ ಕಛೇರಿಯಲ್ಲಿ ಆರ್ ಎ ನಂ. 129/2019 ರಂತೆ ಒಂದು ಪ್ರಕರಣ ನಡೆದಿತ್ತು ಎಂದರೆ ಸರಿ . ಆ ಪ್ರಕರಣದಲ್ಲಿ ಶಿವಗೌಡಾ ರಾಮಗೌಡಾ ಪಾಟೀಲ ಇವರ ಹೆಸರು ಕಡಿಮೆ ಆಗಿರುತ್ತದೆ ಎಂದರೆ ಸರಿ . ಸದ್ರಿ ಶಿವಗೌಡಾ ರಾಮಗೌಡಾ ಪಾಟೀಲ ಇವರು ಡಿ.ಸಿ. ನ್ಯಾಯಾಲಯದಲ್ಲಿ ಅಪೀಲು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರ್.ಪಿ.ಆರ್.ಟಿ.ಎ 225/2022-23 ರಲ್ಲಿ ನಾನು ಒಂದು ಬಾರಿ ಹಾಜರ ಆಗಿರುತ್ತೇನೆ. ಸದ್ರಿ ಪ್ರಕರಣ ಇನ್ನೂ ವಿಚಾರಣೆ ಹಂತದಲ್ಲಿ ಬಾಕಿ ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ತಿ ಶೇತಗಿ ಜಮೀನು ಎಂದು ತೋರಿಸಲು ಬೆಳೆ ಬೆಳೆದ ಬಗ್ಗೆ ಆರ್ ಟಿ ಸಿ ಬಿಟ್ಟು ಫೋಟೊ ವಗೈರೆ ಹಾಜರ ಪಡಿಸಿರುವುದಿಲ್ಲ. ಸದ್ರಿ ಜಮೀನಿನಲ್ಲಿ ಜೋಳ ಮತ್ತು ಸೊಯಾಬಿನ ಬೆಳೆಯುತ್ತಿದ್ದೇವೆ . ದಾವಾಸ್ತಿಯಲ್ಲಿ ಬೆಳೆ ಬೆಳೆಯುತ್ತಿದ್ದ ಬಗ್ಗೆ ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿರುತ್ತೇನೆ. 1997 ರಿಂದ ದಾವಾಸ್ತಿಯು ಬಿನ್ ಶೇತಗಿ ಜಮೀನು ಆಗಿರುತ್ತದೆ ಎಂದರೆ

ಸರಿಯಲ್ಲ. ಪಹಣಿ ಪತ್ರಿಕೆ ಆಧಾರದ ಮೇಲೆ ಶೇತಗಿ ಜಮೀನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ರಿಂದ 5 ನೇ ಪ್ರತಿವಾದಿಯರು ರಾಜಕೀಯ ವ್ಯಕ್ತಿಗಳು ಅಲ್ಲ ಎಂದರೆ ಸರಿ . ಪ್ರತಿವಾದಿಯರು ಈ ಕೇಸಿನಲ್ಲಿ ಹಾಜರ ಪಡಿಸಿದ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಎಲ್ಲಾ ಮನೆಗಳಿಗೆ ವಿದ್ಯುತ ಸಂಪರ್ಕ ಇದೆ ಎಂದರೆ ಸರಿ . 2010 ರ ಕ್ಕಿಂತ ಮುಂಚೆ ವಿದ್ಯುತ್ ಸಂಪರ್ಕ ಹೊಂದಿವೆ ಎಂದರೆ ಸರಿ. ನನ್ನ ಗಂಡ ಜೀವಂತ ಇದ್ದಾಗ ದಿನಾಂಕ 22-04-1997 ರಂದು 1 ನೇ ಪ್ರತಿವಾದಿ ತುಕಾರಾಮ ಲಗಮಾ ಕೋಳಿ ಇವರಿಗೆ ಖರೀದಿ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ಪ್ರಕಾರ ನನ್ನ ಗಂಡನು 1997 ರಲ್ಲಿ ರುದ್ರಪ್ಪಾ ಯಲ್ಲಪ್ಪ ಬೆನಕನಡೋಣಿ, ಅಬ್ದುಲಖಾದರ ಮದಾರಸಾಬ ಬಡಗಾವಿ, ಫಯಾಅಹ್ಮದ ಗೋರಿಖಾನ, ದತ್ತಾತ್ರೆಯ ಶೆಟ್ಟೆಪ್ಪ ಅಮ್ಮಿನಭಾವಿ ಇವರಿಗೆ 5 ಖರೀದಿ ಪತ್ರದ ಮೂಲಕ ಮಾರಾಟ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡ ನಮ್ಮ ಮನೆತನದ ಆಗುಹೋಗುಗಳನ್ನು ನನ್ನ ಮುಂದೆ ಹೇಳುತ್ತಿದ್ದರು ಎಂದರೆ ಸರಿಯಲ್ಲ. ರುದ್ರಪ್ಪಾ ಯಲ್ಲಪ್ಪ ಬೆನಕನಡೋಣಿ, ಅಬ್ದುಲಖಾದರ ಮದಾರಸಾಬ ಬಡಗಾವಿ, ಫಯಾಅಹ್ಮದ ಗೋರಿಖಾನ, ದತ್ತಾತ್ರೆಯ ಶೆಟ್ಟೆಪ್ಪ ಅಮ್ಮಿನಭಾವಿ ಇವರುಗಳು ಬೇರೆ ಬೇರೆ ಜನರಿಗೆ ಖರೀದಿ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1997 ರಿಂದ ಇಲ್ಲಿವರೆಗೆ ಆದಂತಹ ಎಲ್ಲಾ ಖರೀದಿ ಪತ್ರಗಳ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿಯಲ್ಲ. ಅದೇ ಪ್ರಕಾರ 1 ರಿಂದ 5 ನೇ ಪ್ರತಿವಾದಿಯರೂ ಸಹ ದಾವಾಸ್ತಿಯನ್ನು ಖರೀದಿ ತೆಗೆದುಕೊಂಡ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿಯಲ್ಲ.

ಸರ್ವೆ ನಂ. 118 ಅ/2 ರ ಜಮೀನಿನಲ್ಲಿ ಸಿಟಿಎಸ್ ನಂ. 4335 ರಂತೆ ನಂಬರ ಬಿದ್ದಿದೆ ಎಂದರೆ ಸರಿ . ಅದರಲ್ಲಿ 1 ರಿಂದ 46 ರಂತೆ ಒಟ್ಟು 46 ಪ್ಲಾಟಗಳು ಬಿದ್ದಿರುತ್ತವೆ ಎಂದರೆ ಸರಿ . ಆ ಪ್ರಕಾರ ಖರೀದಿದಾರರು ಪ್ಲಾ 1 ರಿಂದ 46 ರಲ್ಲಿ ಮನೆಗಳನ್ನು ಕಟ್ಟಿರುತ್ತಾರೆ ಎಂದರೆ ಸರಿ . ದಾವಾಸ್ತಿ 30 ಗುಂಟೆ ಜಮೀನಿನಲ್ಲಿ ಸಿಟಿಎಸ್ ನಂ.4335/ಅ ಎಂದುನಂಬರ ಬಿದ್ದಿದೆ ಎಂದರೆ ಸರಿ. ದಾವಾಸ್ತಿ ಎಲ್ಲಾ ಪ್ಲಾಟಗಳು ಸಿಟಿ ಸರ್ವೆ

ಹದ್ದಿಯಲ್ಲಿ ಬರುತ್ತವೆ ಎಂದರೆ ಸರಿ. ಮನೆಗಳ ಮಾಲೀಕರು ಪುರಸಬೆಗೆ ತೆರಿಗೆ ಕಟ್ಟುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿ ಕಟ್ಟಿ ಇವರು 2004 ರಲ್ಲಿ ದಾವಾಸ್ತಿಯಲ್ಲಿ ಮನೆ ಕಟ್ಟಿರುತ್ತಾರೆ ಎಂದರೆ ಸರಿ . 3 ನೇ ಪ್ರತಿವಾದಿಯವರು 2006 ಮತ್ತು 2010 ರಲ್ಲಿ ದಾವಾಸ್ತಿಯಲ್ಲಿ ಮನೆ ಕಟ್ಟಿರುತ್ತಾರೆ ಎಂದರೆ ಸರಿ. 4 ನೇ ಪ್ರತಿವಾದಿ ಕಟ್ಟಿದ ಮನೆಯನ್ನು ಖರೀದಿ ತೆಗೆದುಕೊಂಡಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. 5 ನೇ ಪ್ರತಿವಾದಿ 2011 ರಲ್ಲಿ ದಾವಾಸ್ತಿಯಲ್ಲಿ ಮನೆ ಕಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ .

ಸದ್ರಿ ದಾವೆಯನ್ನು ತುಕಾರಾಮ ಕೋಳಿಯವರು ಮತ್ತು ಉಳಿದವರ ವಿರುದ್ಧ ಹೂಡಿರುತ್ತೇನೆ . ಅವರ ಹೆಸರು ನನಗೆ ಗೊತ್ತಿಲ್ಲ. ದಾವಾಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ನಾವು ಮಾಲಕರು ಅಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ಬೆಳೆ ಬೆಳೆಯುತ್ತಾ ಬಂದಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ್ಗೆ ಸುಮಾರು 5 ವರ್ಷಗಳ ಹಿಂದೆ ಪ್ಲಾಟಗಳ ಕಿಮ್ಮತ್ತು 5 ಪಟ್ಟು ಹೆಚ್ಚಾಗಿದೆ ಎಂದರೆ ಸರಿ . ದಾವಾಸ್ತಿಯಲ್ಲಿ ಕೆಲವು ಕಡೇಗೆ ಕಳ್ಳಿ ಗಿಡ ಮತ್ತು ಜ್ಯಾಲಿ ಬೆಳೆದಿರುತ್ತದೆ ಎಂದರೆ ಸರಿ. 2005 ರಿಂದ ದಾವಾಸ್ತಿಯನ್ನು ನೋಡುತ್ತ ಬಂದಿರುತ್ತೇನೆ ಎಂದರೆ ಸರಿ. ದಾವಾಸ್ತಿಗೆ ನಾನು ಮೊಟ್ಟ ಮೊದಲ ಬಾರಿಗ ಮೋಜಣಿ ಕಾಲಕ್ಕೆ ಹೋಗಿರುತ್ತೇನೆ ಎಂದರೆ ಸರಿ . ಅದಕ್ಕಿಂತ ಮೊದಲು ನಾನು ದಾವಾಸ್ತಿಗೆ ಹೋಗಿಲ್ಲ ಎಂದರೆ ಸರಿ .

ಪ್ರತಿವಾದಿ 1 ರಿಂದ 5 ರವರನ್ನು ಬಿಟ್ಟು ಉಳಿದವರ ಮೇಲೆ ಅತಿಕ್ರಮಣ ಮಾಡಿರುತ್ತಾರೆ ಎಂದು ಕೇಸು ಮಾಡಿಲ್ಲ ಎಂದರೆ ಸರಿ. ದಾವಾಸ್ತಿಗೂ ನಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪ್ಲಾಟಗಳ ಕಿಮ್ಮತ್ತು 5 ಪಟ್ಟು ಹೆಚ್ಚಾಗಿದ್ದರಿಂದ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಅವರ ವಿರುದ್ಧ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು) ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ